**ಪ್ರಧಾನ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಹರಿಹರ**
**ಸಿ.ಸಿ ನಂ.23/2025**

ಪಿರ್ಯಾದಿದಾರರುಃ ವಿರುದ್ಧ ಆರೋಪಿ

ಸರಕಾರದ ಪರವಾಗಿ ಹರಿಹರ ಗ್ರಾಮಾಂತರ
ಪೊಲೀಸ್ ಠಾಣೆ.

ಕಲ್ಮೇಶ ತಂದೆ ಶಂಕರಪ್ಪ,
ವಃ 34 ವರ್ಷ, ಡ್ರೈವರ್,
ವಾಸಃ ಸಚ್ಚಿದಾನಂದ ನಗರ,
ಕಲ್ಲಘಟಗಿ ತಾಲ್ಲೂಕು, ಧಾರವಾಡ.

ದಂಡ ಪ್ರಕ್ರಿಯಾ ಕಲಂ **313** ರ ಅಡಿ ಆರೋಪಿತನ ಹೇಳಿಕೆ

ಪ್ರಶ್ನೆಃ 1 ನ್ಯಾಯಾಲಯದ ಮುಂದೆ ಅಭಿಯೋಜನೆಯ ಪರವಾಗಿ ನಡೆದ ವಿಚಾರಣೆಯಲ್ಲಿ ಸಾಕ್ಷಿದಾರರು ಹೇಳಿರುವ ಹೇಳಿಕೆಯನ್ನು ಕೇಳಿರುವಿರಾ?
ಉತ್ತರಃ

ಪ್ರಶ್ನೆಃ 2 ಫ್ರಾಸಾ.1 ಉಜ್ವಲ ಗೌಡ ಇವರು ತಮ್ಮ ಸಾಕ್ಷ್ಯದಲ್ಲಿ, ಚಾಸಾ.2 ಮತ್ತು 3 ರವರ ಪರಿಚಯವಿದೆ. ಚಾಸಾ.4 ತನ್ನ ತಾಯಿ. ಚಾಸಾ.5 ತನ್ನ ಅಕ್ಕ. ಚಾಸಾ.6 ತನ್ನ ತಂಗಿ. 2024 ರಲ್ಲಿ ಸಂಜೆ 4.45 ಗಂಟೆಗೆ ತಾನು, ತನ್ನ ಅಕ್ಕ, ತಂಗಿ ಅಮ್ಮ ರವರು ತಮ್ಮ ಮನೆದೇವರಿಗೆ ಹೋಗಿ ತಮ್ಮ ಶಿಪ್ಟ್ ಕಾರ ನಂ.ಕೆಎ/02 ಎಂ ಕೆ 7702 ನೇದ್ದರಲ್ಲಿ ಹೋಗಿ ಮರಳಿ ಬೆಂಗಳೂರಿಗೆ ಹೋಗುತ್ತಿರುವಾಗ ರಾಣೆಬೆನ್ನೂರು ಟೋಲ್ ದಾಟಿದ ನಂತರ ಸೇತುವೆ ಮೇಲೆ ಒಂದು ಕೆ ಎಸ್ ಆರ್ ಟಿ ಸಿ ಬಸ್ ಅತಿವೇಗ ಮತ್ತು ಅಜಾಗರೂಕತೆಯಿಂದ ಹಿಂದಿನಿಂದ ಬಂದು ತಮ್ಮ ಕಾರಿಗೆ ಡಿಕ್ಕಿ ಪಡಿಸಿದ ಪರಿಣಾಮ ಅಪಘಾತ ಸಂಭವಿಸಿರುತ್ತದೆ. ಸದರಿ ಅಪಘಾತದಲ್ಲಿ ತನ್ನ ತಾಯಿಗೆ ಕೈ ತೆರಚಿ ಬೆನ್ನಿಗೆ ಪೆಟ್ಟಾಗಿರುತ್ತದೆ. ಚಾಸಾ.5 ಮತ್ತು 6 ತನ್ನ ತಂಗಿಗೆ ತಲೆಗೆ ಮತ್ತು ಮೈಕೈಗೆ ಏಟು ಬಿದ್ದು ಪ್ರಜ್ಞೆ ತಪ್ಪಿತ್ತು. ಚಾಸಾ.5 ರವರಿಗೆ ಎಡಗೈ ಸ್ವಾದೀನದಲ್ಲಿ ಇಲ್ಲ. ತಾನು ಕಾರನ್ನು ಸೈಡಿಗೆ ನಿಲ್ಲಿಸಿ ಬಸ್ ನ ಛಾಯ ಚಿತ್ರವನ್ನು ತೆಗೆದುಕೊಂಡಿರುತ್ತೇನೆ. ತನ್ನ ತಾಯಿ, ಅಕ್ಕ ತಂಗಿಯರನ್ನು ಆಂಬುಲೆನ್ಸನಲ್ಲಿ ಸಿಟಿ ಸೆಂಟ್ರಲ್ ಆಸ್ಪತ್ರೆಗೆ ಕಳುಹಿಸಿಕೊಟ್ಟೆನು. ಅದೇ ದಿನ ಸಂಜೆ 8.00 ಗಂಟೆಗೆ ಹರಿಹರ ಗ್ರಾಮಾಂತರ ಠಾಣೆಗೆ ಹೋಗಿ ದೂರು ನೀಡಿರುತ್ತೇನೆ. ಬಸ್‌ನ ಚಾಲಕ ಹೆಸರನ್ನು ವಿಚಾರಿಸಲಾಗಿ ಚಾಲಕನ ಹೆಸರು ಕಲ್ಮೇಶ ಹಾಗೂ ನಿರ್ವಾಹಕನ ಹೆಸರು ಆನಂದ್ ಎಂದು ತಿಳಿದಿರುತ್ತದೆ. ಸಾಕ್ಷಿಯು ಗುರುತಿಸಿದ ದೂರನ್ನು ನಿಪಿ.1 ಎಂದು ಗುರುತಿಸಲಾಯಿತು. ಅಪಘಾತ ಪಡಿಸಿದ ಬಸ ನಂ. ಕೆಎ/27 0877. ದೂರು ನೀಡಿದ ಮಾರನೇ ದಿನ ಬೆಳಿಗ್ಗೆ ಸ್ಥಳಕ್ಕೆ ಭೇಟಿ ನೀಡಿ ಪೊಲೀಸರು ತನ್ನ, ಚಾಸಾ.2 ಮತ್ತು 3 ರವರ ಸಮಕ್ಷಮ ತನಿಖೆ ಮಾಡಿರುತ್ತಾರೆ.

ಸದರಿ ತನಿಖೆಯನ್ನು ಬೆಳಿಗ್ಗೆ 9.00 ರಿಂದ 9.45 ರವರೆಗೆ ಮಾಡಿರುತ್ತಾರೆ. ಸದರಿ ಸ್ಥಳದಲ್ಲಿ ಪಂಚನಾಮೆ ಜರುಗಿಸಿರುತ್ತಾರೆ. ಸಾಕ್ಷಿಯು ಗುರುತಿಸಿದ ಪಂಚನಾಮೆಯನ್ನು ನಿಪಿ.2 ಎಂದು ಗುರುತಿಸಿದ್ದು, ಸದರಿ ಕಾಲಕ್ಕೆ ಕಚ್ಚಾ ನಕಾಶೆ ಹಾಗೂ ಛಾಯ ಚಿತ್ರ ತೆಗೆದಿರುತ್ತಾರೆ. ಸದರಿ ಕಚ್ಚಾ ನಕಾಶೆ ಯನ್ನು ನಿಪಿ.3 ಎಂದು, ಛಾಯ ಚಿತ್ರವನ್ನು ನಿಪಿ. 4 ಎಂದು ಗುರುತಿಸಲಾಯಿತು. ಅದೇ ದಿನ ಸುಮಾರು 11 ಗಂಟೆಗೆ ಗ್ರಾಮಾಂತರ ಠಾಣೆಗೆ ವಾಹನಗಳನ್ನು ನಿಲ್ಲಿಸಿ ತನಿಖೆ ಮಾಡಿ ಛಾಯ ಚಿತ್ರ ತೆಗೆದಿರುತ್ತಾರೆ. ಸದರಿ ಸಂದರ್ಭದಲ್ಲಿ ತಾನು ಚಾಸಾ.2 ಮತ್ತು 3 ಹಾಗೂ ಪೊಲೀಸರು ಇದ್ದೆವು. ಸಾಕ್ಷಿಯು ಗುರುತಿಸಿದ ಪಂಚನಾಮೆಯನ್ನು ನಿಪಿ.5 ಎಂದು, ಛಾಯ ಚಿತ್ರವನ್ನು ನಿಪಿ. 6 ರಿಂದ 9 ಎಂದು ಗುರುತಿಸಲಾಯಿತು. ಈ ದಿನ ಸದರಿ ಬಸ್ ಚಾಲಕ ನ್ಯಾಯಾಲಯದಲ್ಲಿ ಇದ್ದಾರೆ ಎಂದು ನಿಮ್ಮ ವಿರುದ್ಧ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆಃ 3 ಫ್ರಾಸಾ.2 ರಾಜು ಇವರು ತಮ್ಮ ಸಾಕ್ಷ್ಯದಲ್ಲಿ, ಚಾಸಾ.3 ರವರ ಪರಿಚಯವಿದೆ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಅದರಲ್ಲಿ ತಮ್ಮ ಸಹಿ ಇರುವುದಾಗಿ ಗುರುತಿಸಿದ್ದು ಸದರಿ ಸಹಿಗಳನ್ನು ಈಗ 1 ವರ್ಷದ ಹಿಂದೆ ಹರಗನಹಳ್ಳಿಯ ಹತ್ತಿರ ಬೈಪಾಸ್ ರಸ್ತೆಯಲ್ಲಿ ಮಾಡಿರುತ್ತೇನೆ. ಸಾಕ್ಷಿಗೆ 1 ಛಾಯ ಚಿತ್ರ ತೋರಿಸಲಾಗಿ ಅದರಲ್ಲಿ ತಾನು ಇರುವುದಾಗಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ.4 ಎಂದು ಗುರುತಿಸಲಾಗಿದೆ. ಸದರಿ ಛಾಯ ಚಿತ್ರವನ್ನು ಅಪಘಾತವಾದ ಸ್ಥಳದಲ್ಲಿ ತೆಗೆದಿರುತ್ತಾರೆ. ಸದರಿ ಸಂದರ್ಭದಲ್ಲಿ ಬೆಳಿಗ್ಗೆ 9.00 ರಿಂದ 9.30 ಗಂಟೆ ಆಗಿತ್ತು. ಸಾಕ್ಷಿಗೆ ಇನ್ನೊಂದು ದಾಖಲೆಯನ್ನು ತೋರಿಸಲಾಗಿ ಅದರಲ್ಲಿ ತಮ್ಮ ಸಹಿ ಇರುವುದಾಗಿ ಗುರುತಿಸಿದ್ದು ಅದು ವಾಹನ ಪಂಚನಾಮೆಯಾಗಿದ್ದು ಅದನ್ನು ಈಗಾಗಲೇ ನಿಪಿ.5 ಎಂದು ಗುರುತಿಸಿದ್ದು ಸದರಿ ಸಹಿಯನ್ನು ಠಾಣೆಯಲ್ಲಿ ಮಾಡಿರುತ್ತೇನೆ. ಅಪಘಾತಕ್ಕೊಳಗಾದ ಕಾರು ಮತ್ತು ಬಸ್ ನ್ನು ನಿಲ್ಲಿಸಿಕೊಂಡು ಛಾಯ ಚಿತ್ರ ತೆಗೆದಿರುತ್ತಾರೆ. ಸದರಿ 2 ಸಂದರ್ಭದಲ್ಲಿ ನನ್ನ ಜೊತೆ ಚಾಸಾ.3 ರವರು ಇದ್ದರು. ವಾಹನ ಪಂಚನಾಮೆಯನ್ನು ಬೆಳಿಗ್ಗೆ 11.00 ರಿಂದ 12.00 ಗಂಟೆ ವರೆಗೆ ಮಾಡಿರುತ್ತಾರೆ ಎಂದು ನಿಮ್ಮ ವಿರುದ್ಧ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆಃ 4 ಫ್ರಾಸಾ.3 ಸುನಿತಾ ಇವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕಃ 04.11.2024 ರಂದು ಬೆಳಿಗ್ಗೆ ಬೆಂಗಳೂರಿನಿಂದ ರಾಣೆಬೆನ್ನೂರಿಗೆ ತಾವು ತಮ್ಮ ಸ್ವಿಫ್ಟ್ ಕಾರ ನಂ. ಕೆಎ 02 ಎಂ ಕೆ 1722 ನಲ್ಲಿ ತಾನು, ಚಾಸಾ.1 ಮತ್ತು ಚಾಸಾ.6 ರವರು ಹೊರಟಿದ್ದೆವು. ರಾಣೆಬೆನ್ನೂರಿನಿಂದ

ಕದರಮಂಡಲಗಿ ದೇವಸ್ಥಾನಕ್ಕೆ ಹೋಗಿ ಮರಳಿ ಅದೇ ಕಾರಿನಲ್ಲಿ ತಾನು, ಚಾಸಾ.1 , 5 ಮತ್ತು 6 ರವರು ಬರುತ್ತಿರುವಾಗ ಸಂಜೆ 4.45 ಗಂಟೆಗೆ ಹರಗನಹಳ್ಳಿ ಬ್ರಿಡ್ಜ ಹತ್ತಿರ ಹಿಂದಿನಿಂದ ಒಂದು ಕೆ ಎಸ್ ಆರ್ ಟಿ ಸಿ ಬಸ್ ವೇಗವಾಗಿ ಬಂದು ತಮ್ಮ ಕಾರಿಗೆ ಡಿಕ್ಕಿ ಪಡಿಸಿತು. ಆಗ ಕಾರಿನಲಿದ್ದ ತಮ್ಮ 4 ಜನಕ್ಕೆ ಪೆಟ್ಟಾಯಿತು. ಸ್ಥಳದಲ್ಲಿ ಇದ್ದವರು ಅಂಬುಲೆನ್ಸಗೆ ಕರೆ ಮಾಡಿ ತಮ್ಮನ್ನು ಆಸ್ಪತ್ರೆಗೆ ಕಳುಹಿಸಿಕೊಟ್ಟರು. ತನಗೆ ತಲೆಗೆ ಮೂಗಿಗೆ ಮತ್ತು ಕಾಲಿಗೆ ಪೆಟ್ಟಾಯಿತು, ಚಾಸಾ.1 ರವರಿಗೆ ತಲೆಗೆ ಪೆಟ್ಟಾಯಿತು. ಚಾಸಾ.6 ರವರಿಗೆ ಕಾಲು ಮುರಿದಿತ್ತು. ಚಾಸಾ.5 ರವರಿಗೆ ತುಂಬಾ ಪೆಟ್ಟಾಗಿತ್ತು. ಚಾಸಾ.5 ರವರಿಗೆ ಪ್ರಜ್ಞೆ ಇರಲಿಲ್ಲ. ತಮಗೆ ಅಪಘಾತ ಪಡಿಸಿದ ಬಸ್ ನಂಬರ್ ತನಗೆ ನೆನಪಿಲ್ಲ. ಬಸ್ ಚಾಲಕನ ಹೆಸರು ಕಲ್ಮೇಶ. ಅದೇ ದಿನ ಚಾಸಾ.1 ಠಾಣೆಗೆ ಹೋಗಿ ಬಸ್ ಚಾಲಕನ ವಿರುದ್ದ ದೂರು ನೀಡಿರುತ್ತಾರೆ. ಬಸ್ ಚಾಲಕನನ್ನು ನೋಡಿದರೆ ಗುರುತಿಸುತ್ತೇನೆ. ಬಸ್ ಚಾಲಕ ಈ ದಿನ ನ್ಯಾಯಾಲಯದಲ್ಲಿ ಇದ್ದಾರೆ. ಈ ಎಲ್ಲಾ ವಿಚಾರವಾಗಿ ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ ಎಂದು ನಿಮ್ಮ ವಿರುದ್ಧ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆಃ 5 ಫ್ರಾಸಾ.4 ಪ್ರಿಯಾಂಕ ಇವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕಃ 04.11.2024 ರಂದು ಬೆಳಿಗ್ಗೆ ಬೆಂಗಳೂರಿನಿಂದ ದೇವಸ್ಥಾನಗಳಿಗೆ ಹೋಗಿ ನಂತರ ತಮ್ಮ ಊರಾದ ರಟ್ಟಿಹಳ್ಳಿ ತಾಲೂಕು ಮೇದೂರಗೆ ಬಂದಿದ್ದರು. ತಾನು ಸಹ ಅವರೊಂದಿಗೆ ಬೆಂಗಳೂರಿಗೆ ಅವರ ಕಾರಲ್ಲಿ ಹೋದೆನು. ತಾನು, ಚಾಸಾ.1 ಮತ್ತು ಚಾಸಾ.6 ರವರು ಹೊರಟಿದ್ದೆವು. ಹೋಗುತ್ತಿರುವಾಗ ಹರಗನಹಳ್ಳಿ ಬ್ರಿಡ್ಜ ಹತ್ತಿರ ಹಿಂದಿನಿಂದ ಒಂದು ಕೆ ಎಸ್ ಆರ್ ಟಿ ಸಿ ಬಸ್ ವೇಗವಾಗಿ ಬಂದು ತಮ್ಮ ಕಾರಿಗೆ ಡಿಕ್ಕಿ ಪಡಿಸಿತು. ತಾನು ಮತ್ತು ಚಾಸಾ.6 ಹಿಂದೆ ಕುಳಿತಿದ್ದೆವು. ಆಗ ತಮಗೆ ಮತ್ತು ಚಾಸಾ.6 ರವರಿಗೆ ತುಂಬಾ ಪೆಟ್ಟು ಬಿತ್ತು. ತನಗೆ ಪ್ರಜ್ಞೆ ಇರಲಿಲ್ಲ. ತನಗೆ ಪ್ರಜ್ಞೆ ಬಂದಾಗ ತಾನು ಆಸ್ಪತ್ರೆಯಲ್ಲಿ ಇದ್ದೆನು. ತನಗೆ ಕತ್ತು ಮತ್ತು ಎಡಗಾಲಿಗೆ ಪೆಟ್ಟಾಗಿತ್ತು. ಬಸ್ ಚಾಲಕ ಮತ್ತು ಕಂಡಕ್ಟರ್ ತನಗೆ ಪ್ರಜ್ಞೆ ಬಂದ ನಂತರ ಆಸ್ಪತ್ರೆಗೆ ಬಂದು ಮಾತನಾಡಿಸಿಕೊಂಡು ಹೋಗಿದ್ದರು. ಸದರಿಯವರನ್ನು ನೋಡಿದರೆ ತಾನು ಗುರುತಿಸುತ್ತೇನೆ. ಈ ದಿನ ಬಸ್ ಚಾಲಕ ನ್ಯಾಯಾಲಯದಲ್ಲಿ ಇದ್ದಾರೆ. ಈ ಎಲ್ಲಾ ವಿಚಾರವಾಗಿ ಚಾಸಾ.1 ರವರು ದೂರು ನೀಡಿದ್ದಾರೆ. ಈ ಎಲ್ಲಾ ವಿಚಾರವಾಗಿ ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ ಎಂದು ನಿಮ್ಮ ವಿರುದ್ಧ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆಃ 6 ಫ್ರಾಸಾ.5 ಶ್ರೀಜಾ ಇವರು ತಮ್ಮ ಸಾಕ್ಷ್ಯದಲ್ಲಿ, ಈ ದಿನ ತಾನು ನ್ಯಾಯಾಲಯಕ್ಕೆ ಬಂದಿದ್ದೇನೆ. 1 ಬಸ್ ತಮ್ಮ ಕಾರಿಗೆ ಡಿಕ್ಕಿ ಪಡಿಸಿದ ವಿಚಾರಕ್ಕೆ ಸಾಕ್ಷಿ ಹೇಳಲು ಬಂದಿದ್ದೇನೆ.

ಚಾಸಾ.1 ತನ್ನ ಅಣ್ಣ. ಚಾಸಾ.4 ತನ್ನ ತಾಯಿ. ಚಾಸಾ.5 ತನ್ನ ಅಕ್ಕ. ಚಾಸಾ.8 ತನ್ನ ತಂದೆ. ಹೋದ ವರ್ಷ ತಾನು, ತನ್ನ ಅಣ್ಣ ಚಾಸಾ.1, ತನ್ನ ತಾಯಿ ಚಾಸಾ.5, ಚಾಸಾ.6 ತನ್ನ ಅಕ್ಕ ದೇವಸ್ಥಾನಗಳಿಗೆ ಹೋಗಿ ಬೆಂಗಳೂರಿಗೆ ಹೋಗುತ್ತಿರುವಾಗ ಹರಗನಹಳ್ಳಿ ಬ್ರಿಡ್ಜ ಹತ್ತಿರ ಹಿಂದಿನಿಂದ ಒಂದು ಕೆ ಎಸ್ ಆರ್ ಟಿ ಸಿ ಬಸ್ ವೇಗವಾಗಿ ಬಂದು ತಮ್ಮ ಕಾರಿಗೆ ಡಿಕ್ಕಿ ಪಡಿಸಿತು. ತಮ್ಮ ಕಾರು ಒಂದು ಹಂಪ್ಸನ್ನು ನಿಧಾನಕ್ಕೆ ಹತ್ತಿ ಇಳಿಸುತ್ತಿರುವಾಗ ಒಂದು ಬಸ್ ಬಂದು ತಮ್ಮ ಕಾರಿಗೆ ಡಿಕ್ಕಿ ಪಡಿಸಿದ್ದರಿಂದ ಅಪಘಾತವಾಯಿತು. ಅಪಘಾತದಿಂದ ಚಾಸಾ.5 ರವರಿಗೆ ಪ್ರಜ್ಞೆ ಇರಲಿಲ್ಲ. ತನ್ನ ತಾಯಿಗೆ ಕಾಲು ಮತ್ತು ತಲೆಗೆ ಪೆಟ್ಟು ಬಿದ್ದಿತ್ತು. ತನ್ನ ಅಣ್ಣನಿಗೆ ತಲೆಗೆ ಪೆಟ್ಟು ಬಿದ್ದಿತ್ತು. ತನಗೆ 2 ಕಾಲುಗಳಿಗೆ ಪೆಟ್ಟು ಬಿದ್ದಿತ್ತು. ನಂತರ ತಮ್ಮನ್ನು ಅಂಬುಲೆನ್ಸನಲ್ಲಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಅಪಘಾತ ಪಡಿಸಿದ ಬಸ್ ಚಾಲಕನನ್ನು ನೋಡಿದ್ದೇನೆ. ಅವರು ಈಗ ನ್ಯಾಯಾಲಯದಲ್ಲಿ ಇದ್ದಾರೆ. ಈ ಎಲ್ಲಾ ವಿಚಾರವಾಗಿ ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ ಎಂದು ನಿಮ್ಮ ವಿರುದ್ಧ ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆಃ 7 ಫ್ರಾಸಾ.6 ಮೊಹಮದ್ ಖಾಲೀದ್ ಎ.ಎಸ್. ಇವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕಃ 05.11.2024 ರಂದು ಪಿಎಸ್ಐ ಗ್ರಾಮಾಂತರ ಪೋಲೀಸ್ ಠಾಣೆ ರವರ ಕೋರಿಕೆ ಮೇರೆಗೆ ಗ್ರಾಮಾಂತರ ಪೋಲೀಸ್ ಠಾಣೆಯ ಆವರಣದಲ್ಲಿ 2 ವಾಹನಗಳನ್ನು ಪರಿಶೀಲನೆ ಮಾಡಿರುತ್ತೇನೆ. ಕೆಎ 27 ಎಫ್ 0811 ಕೆಎಸ್ ಆರ್ ಟಿ ಸಿ ಬಸ್ ಆಗಿದ್ದು ಸದರಿ ವಾಹನದ ಮುಂಭಾಗ ಜಖಂ ಗೊಂಡಿರುತ್ತದೆ. ಹಿಂಭಾಗದ ಬಂಪರ್ ಮತ್ತು ಎಡಬದಿಯ ಹೆಡ್ ಲೈಟ್ ಜಖಂಗೊಂಡಿರುತ್ತದೆ. ಇನ್ನಿತರ ಭಾಗಗಳು ಸುಸ್ಥಿತಿಯಲ್ಲಿದ್ದವು. ಇನ್ನೊಂದು ವಾಹನ ಕೆಎ 02 ಎಂ ಕೆ–1722 ಒಂದು ಮಾರುತಿ ಸ್ವಿಫ್ಟ್ ಕಾರ್ ಆಗಿದ್ದು ಸದರಿ ವಾಹನದ ಹಿಂಬಾಗದ ಬಂಪರ್ ಜಖಂಗೊಂಡಿರುತ್ತದೆ. ಹಿಂಭಾಗದ ಡಕ್ಕಿ ಡೋರ್ ಮತ್ತು ಅದರ ಗಾಜುಗಳು ಜಖಂಗೊಂಡಿರುತ್ತದೆ. ಹಿಂಭಾಗದ 2 ಟೇಲ್ ಲ್ಯಾಂಪ್ ಜಖಂಗೊಂಡಿರುತ್ತದೆ. ಹಿಂಭಾಗದ ಎರಡೂ ಬಾಗಿಲುಗಳು ಜಖಂಗೊಂಡಿರುತ್ತದೆ. ಹಿಂಭಾಗದ ರೂಫ್ ಜಖಂಗೊಂಡಿರುತ್ತದೆ. ಇನ್ನಿತರ ಭಾಗಗಳು ಸುಸ್ಥಿತಿಯಲ್ಲಿದ್ದವು. ಸದರಿ 2 ವಾಹನಗಳು ರಸ್ತೆಯ ಮೇಲೆ ಓಡಾಡುವ ಸುಸ್ಥಿತಿಯಲ್ಲಿದ್ದು ಅದರ ತಡೆಗಳು ಸುಸ್ಥಿತಿಯಲ್ಲಿದ್ದವು. ತನ್ನ ಅಭಿಪ್ರಾಯದ ಪ್ರಕಾರ ಎರಡೂ ವಾಹನಗಳಲ್ಲಿ ಯಾವುದೇ ಯಾಂತ್ರಿಕ ದೋಷದಿಂದ ಅಪಘಾತ ಸಂಭವಿಸಿರುವುದಿಲ್ಲ ಎಂದು ಅಭಿಪ್ರಾಯ ಪಟ್ಟಿರುತ್ತೇನೆ. ಈ ಕುರಿತು ನಾನು ವರದಿ ನೀಡಿರುತ್ತೇನೆ. ಸಾಕ್ಷಿಯು ತಮ್ಮ ವರದಿಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ. 10 ಎಂದು, ಸಾಕ್ಷಿಯ ಸಹಿಯನ್ನು ನಿಪಿ. 10 ಎ ಎಂದು ಗುರುತಿಸಲಾಯಿತು ಎಂದು ನಿಮ್ಮ ವಿರುದ್ಧ ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆಃ 8 ಫ್ರಾಸಾ.7 ಅನಿಲ್ ಕುಮಾರ್ .ಆರ್.ಕೆ. ರವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕಃ 04.11.2024 ರಂದು ಚಾಸಾ.1 ರವರು ಠಾಣೆಗೆ ಹಾಜರಾಗಿ ನೀಡಿದ ದೂರನ್ನು ಸ್ವೀಕರಿಸಿ ಠಾಣಾ ಗುನ್ನಾ ಸಂ.4/11 ದಾಖಲಿಸಿಕೊಂಡು ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಹಾಗೂ ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ. ನಂತರ ದಿನಾಂಕಃ 05.11.2024 ರಂದು ಸ್ಥಳ ಪಂಚನಾಮೆಯನ್ನು ಹಾಗೂ ವಾಹನ ಪಂಚನಾಮೆಯನ್ನು ಜರುಗಿಸಿರುತ್ತೇನೆ. ಪಂಚನಾಮೆ ಕಾಲಕ್ಕೆ ಕಚ್ಚಾನಕಾಶೆ ತೆಗೆಸಿ ಫೋಟೋ ತೆಗೆಸಿರುತ್ತೇನೆ. ವಾಹನ ಪರಿಶೀಲನೆಗಾಗಿ ಮೋಟಾರ್ ವಾಹನ ನಿರೀಕ್ಷಕರಿಗೆ ನಿವೇದನೆಯನ್ನು ಸಲ್ಲಿಸಿರುತ್ತೇನೆ. ಚಾಸಾ.3 ರಿಂದ 6 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ. ನಂತರ ಆರೋಪಿತರು ಠಾಣೆಗೆ ಹಾಜರಾಗಿದ್ದು ಸೂಕ್ತ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ದಿ:05.11.2024 ರಂದು ಬಸ್ ನ ನಿರೀಕ್ಷಕರಿಂದ ಇಂಡೆನ್ನಿಟಿ ಬಾಂಡನ್ನು ಪಡೆದು ವಾಹನವನ್ನು ಬಿಡುಗಡೆ ಮಾಡಿರುತ್ತೇನೆ. ದಿಃ15.11.2024 ರಂದು ವಾಹನದ ಮಾಲೀಕರಾದ ಶ್ರೀಕಾಂತ್ ರವರಿಂದ ಇಂಡೆಮ್ನಿಟಿ ಬಾಂಡನ್ನು ಪಡೆದು ವಾಹನವನ್ನು ಬಿಡುಗಡೆ ಮಾಡಿರುತ್ತೇನೆ. ದಿ:26.11.2024 ರಂದು ಗಾಯಾಳುಗಳ ಗಾಯದ ಪ್ರಮಾಣ ಪತ್ರ ಪಡೆದುಕೊಂಡಿರುತ್ತೇನೆ. ದಿ:05.11.2024 ರಂದು ಐಎಂವಿ ವರದಿ ಸ್ವೀಕರಿಸಿರುತ್ತೇನೆ. ನಂತರ ಸಾಕ್ಷಿ ಅಧಿನಿಯಮ ಕಲಂ63(4) ರಡಿಯಲ್ಲಿ ನಮ್ಮ ಸಿಬ್ಬಂದಿಯಿಂದ ಪ್ರಮಾಣ ಪತ್ರವನ್ನು ಪಡೆದಿರುತ್ತೇನೆ. ನಂತರ ಆರೋಪಿತರ ವಿರುದ್ಧ ಸಾಕಷ್ಟು ಸಾಕ್ಷ್ಯಾಧಾರಗಳು ಕಂಡು ಬಂದಿದ್ದರಿಂದ ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುತ್ತೇನೆ. ಸಾಕ್ಷಿಯು ಸಾಕ್ಷಿಯು ಪ್ರಥಮ ವರ್ತಮಾನ ವರದಿಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ.11 ಎಂದು, ಪಂಚನಾಮೆ ಕಾಲಕ್ಕೆ ತೆಗೆದ ಫೋಟೋಗಳು ನಿಪಿ.4 ರಿಂದ 7, 3 ಇಂಡೆಮ್ನಿಟಿ ಬಾಂಡ್ ಗಳನ್ನು ನೋಡಿ ಗುರುತಿಸಿದ್ದರಿಂದ ಅವುಗಳನ್ನು ಕ್ರಮವಾಗಿ ನಿಪಿ. 12 ರಿಂದ 14 ಎಂದು, ಸಾಕ್ಷಿಯು 3 ಗಾಯದ ಪ್ರಮಾಣ ಪತ್ರಗಳನ್ನು ನೋಡಿ ಗುರುತಿಸಿದ್ದರಿಂದ ಅವುಗಳನ್ನು ಕ್ರಮವಾಗಿ ನಿಪಿ. 15 ರಿಂದ 17 ಎಂದು, ಸಾಕ್ಷಿಯು 62 ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ. 18, ಸಿಡಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ. 19 ಎಂದು ಗುರುತಿಸಲಾಯಿತು ಹಾಗೂ ಆರೋಪಿತನನ್ನು ನೋಡಿ ಗುರುತಿಸುವುದಾಗಿ ನಿಮ್ಮ ವಿರುದ್ಧ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆಃ 9 ಫ್ರಾಸಾ.8 ಡಾ.ವಿಜಯಕುಮಾರ ಜತ್ತಿ ಇವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕಃ 04.11.2024 ರಂದು 6 ಗಂಟೆ ಸಮಯದಲ್ಲಿ 3 ಜನ ಗಾಯಾಳುಗಳು ರಸ್ತೆ ಅಪಘಾತದ ಹಿನ್ನೆಲೆಯಲ್ಲಿ ಚಿಕಿತ್ಸೆಗಾಗಿ ಬಂದಿದ್ದು, ತಾನು ಅವರನ್ನು ಪರೀಕ್ಷಿಸಿದಾಗ ಪ್ರಿಯಾಂಕರವರಿಗೆ

1. ಬಲಭಾಗದ ತಲೆಯ ಹಿಂಭಾಗದಲ್ಲಿ ನೋವು ಭರಿತ ಬಾವು ಕ್ಷಕಿರಣಕ್ಕೆ ಒಳಪಡಿಸಿದಾಗ ಯಾವುದೇ ಮೂಳೆಮುರಿತ ಹಾಗೂ ರಕ್ತಸ್ರಾವ ಆಗಿರುವುದಿಲ್ಲ. 2. ಬಲತೋಳುಗೈಯಲ್ಲಿ ನೋವು ಭರಿತ ಊತ ಕಂಡು ಬಂದಿರುತ್ತದೆ. ಕ್ಷಕಿರಣಕ್ಕೆ ಒಳಪಡಿಸಿದಾಗ ಯಾವುದೇ ಮೂಳೆಮುರಿತ ಹಾಗೂ ರಕ್ತಸ್ರಾವ ಆಗಿರುವುದಿಲ್ಲ. ಸದರಿ ಗಾಯಾಳು ಸಾದಾ ಸ್ವರೂಪದ ಗಾಯಗಳೆಂದು ಗಾಯದ ಪ್ರಮಾಣ ಪತ್ರ ನೀಡಿರುತ್ತೇನೆ.

ಎರಡನೆಯದಾಗಿ ಉಜ್ವಲ್ ಗೌಡ ಇವರನ್ನು ಪರೀಕ್ಷಿಸಿದಾಗ ಅವರಿಗೆ 1. ಎಡಕಾಲಿನ ನೋವಿನಿಂದ ಕೂಡಿದ ಊತ ಕಂಡು ಬಂದಿರುತ್ತದೆ. ಕ್ಷಕಿರಣಕ್ಕೆ ಒಳಪಡಿಸಿದಾಗ ಯಾವುದೇ ಮೂಳೆಮುರಿತ ಹಾಗೂ ರಕ್ತಸ್ರಾವ ಆಗಿರುವುದಿಲ್ಲ. ಸದರಿ ಗಾಯಾಳು ಸಾದಾ ಸ್ವರೂಪದ ಗಾಯಗಳೆಂದು ಗಾಯದ ಪ್ರಮಾಣ ಪತ್ರ ನೀಡಿರುತ್ತೇನೆ.

ಮೂರನೆಯದಾಗಿ ಶ್ರೀಜಾ ಇವರನ್ನು ಪರೀಕ್ಷಿಸಿದಾಗ ಅವರಿಗೆ 1. ಎದೆಯ ಬಲಭಾಗದ ನೋವಿನಿಂದ ಕೂಡಿದ ಊತ ಕಂಡು ಬಂದಿರುತ್ತದೆ ಕ್ಷಕಿರಣಕ್ಕೆ ಒಳಪಡಿಸಿದಾಗ ಯಾವುದೇ ಮೂಳೆಮುರಿತ ಹಾಗೂ ರಕ್ತಸ್ರಾವ ಆಗಿರುವುದಿಲ್ಲ. 2. ಎಡಮೊಣಕಾಲಿನ ಮೇಲೆ ತರಚಿದ ಗಾಯಗಳು ಇರುತ್ತವೆ. ಸದರಿ ಗಾಯಾಳು ಸಾದಾ ಸ್ವರೂಪದ ಗಾಯಗಳೆಂದು ಗಾಯದ ಪ್ರಮಾಣ ಪತ್ರ ನೀಡಿರುತ್ತೇನೆ. ಸಾಕ್ಷಿಯು ಗಾಯದ ಪ್ರಮಾಣ ಪತ್ರಗಳಲ್ಲಿರುವ ತಮ್ಮ ಸಹಿಗಳನ್ನು ನೋಡಿಗುರುತಿಸಿದ್ದು ಅವುಗಳನ್ನು ನಿಪಿ.15(ಬಿ) ಯಿಂದ 17(ಬಿ) ಎಂದು ಗುರುತಿಸಲಾಯಿತು  ಎಂದು ನಿಮ್ಮ ವಿರುದ್ಧ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆಃ 10 ನೀವು ಏನನ್ನಾದರೂ ಹೇಳಬಯಸುವಿರಾ?

ಉತ್ತರಃ

ಪ್ರಶ್ನೆಃ 11 ನಿಮ್ಮ ಪರವಾಗಿ ಸಾಕ್ಷಿ ವಿಚಾರಣೆ ಮಾಡುವಿರಾ?

ಉತ್ತರಃ

(ತೆರೆದ ನ್ಯಾಯಾಲಯದಲ್ಲಿ ಆರೋಪಿತನಿಗೆ  ಓದಿ ಹೇಳಿ ಅವರ ಹೇಳಿಕೆಯನ್ನು ಪಡೆದುಕೊಳ್ಳಲಾಯಿತು.)

ಸಹಿ/-

ದಿನಾಂಕಃ 10.08.2026 ಪ್ರಧಾನ ಸಿವಿಲ್ ನ್ಯಾಯಾಧೀಶರು

ಸ್ಥಳಃ ಹರಿಹರ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ,ಹರಿಹರ.